**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.**

**ಎಸ್.ಸಿ. 84/2019**

1. ಗುರುಮಠಕಲ್ ಪೊಲೀಸಠಾಣೆ .....ಫಿರ್ಯಾದಿ

ವಿರುದ್ಧ

1. ನಾರಾಯಣ ಮತ್ತು ಇತರರು .....ಆರೋಪಿತರು

**ದೋಷಾರೋಪಣೆ**

ನಾನು **ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್** ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದ

1. ನಾರಾಯಣ ತಂದೆ ಸಣ್ಣ ಭೀಮಣ್ಣ ಶೇಕಸಿಂದಿ, ಸಾಃ ಗೋಪಾಳಪುರ ತಾಃ ಗುರುಮಠಕಲ್ ಜಿಃ ಯಾದಗಿರಿ **(ಮೃತಪಟ್ಟಿರುತ್ತಾರೆ)**
2. ಚೆಂದ್ರಶೇಖರ ತಂದೆ ಕಿಷ್ಟಪ್ಪ ಹೊಸಳ್ಳಿ, ಸಾಃ ಗೋಪಾಳಪುರ ತಾಃ ಗುರುಮಠಕಲ್ ಜಿಃ ಯಾದಗಿರಿ
3. ನರಸಪ್ಪ ತಂದೆ ಸಾಬಣ್ಣ, ಸಾಃ ಗೋಪಾಳಪುರ ತಾಃ ಗುರುಮಠಕಲ್ ಜಿಃ ಯಾದಗಿರಿ
4. ಲಚಮಪ್ಪ ತಂದೆ ಭೀಮಶಪ್ಪ, ಸಾಃ ಗೋಪಾಳಪುರ ತಾಃ ಗುರುಮಠಕಲ್ ಜಿಃ ಯಾದಗಿರಿ
5. ಸಾಬರೆಡ್ಡಿ ತಂದೆ ಕಿಷ್ಟಪ್ಪ, ಸಾಃ ಗೋಪಾಳಪುರ ತಾಃ ಗುರುಮಠಕಲ್ ಜಿಃ ಯಾದಗಿರಿ
6. ಮರೆಪ್ಪ ತಂದೆ ಸಣ್ಣ ಭೀಮಣ್ಣ, ಸಾಃ ಗೋಪಾಳಪುರ ತಾಃ ಗುರುಮಠಕಲ್ ಜಿಃ ಯಾದಗಿರಿ
7. ಶರಣಪ್ಪ ತಂದೆ ಕಬ್ಬಲಿಗ, ಸಾಃ ಗೋಪಾಳಪುರ ತಾಃ ಗುರುಮಠಕಲ್ ಜಿಃ ಯಾದಗಿರಿ **(ಮೃತಪಟ್ಟಿರುತ್ತಾರೆ)**
8. ಅನಂತರೆಡ್ಡಿ ತಂದೆ ಸಾಬರೆಡ್ಡಿ, ಸಾಃ ಗೋಪಾಳಪುರ ತಾಃ ಗುರುಮಠಕಲ್ ಜಿಃ ಯಾದಗಿರಿ

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿಃ 26.03.2019 ರಂದು ಬೆಳಿಗ್ಗೆ 09.00 ಗಂಟೆಯ ಸುಮಾರು ಗೋಪಾಳಪುರ ಗ್ರಾಮದ ಸಾಕ್ಷಿ ನಂ.6 ರವರು ಪತ್ರಾಸ ಮನೆಯಲ್ಲಿ ಆರೋಪಿ 2 ರವರು ವಾಸವಿರಲು ಕೊಟ್ಟಿದ್ದು, 2 ನೇ ಆರೋಪಿ ಈ ಮನೆ ತನಗೆ ಸೇರಿದ್ದು ಅಂತಾ ಚಾಸಾ-1 ಮತ್ತು 6 ರವರ ಸಂಗಡ ತಕರಾರು ಮಾಡುತ್ತಾ ಬಂದಿದ್ದು ಈ ಬಗ್ಗೆ ಪಂಚಾಯಿತಿ ಆಗಿದ್ದು, ಆರೋಪಿತರು ಸಾಕ್ಷಿ ನಂ.6 ರವರ ಪತ್ರಾಸ ಮನೆಯನ್ನು ಕೆಡುವುತ್ತಿದ್ದಾಗ ಸಾಕ್ಷಿ ನಂ.1, 4, 5 ಮತ್ತು 6 ರವರು ಬಂದಿದು, ಸಾಕ್ಷಿ ನಂ.1 ರವರ ಮನೆಯನ್ನು ಯಾಕೆ ಕೆಡುಯುತ್ತೀರಿ ಅಂತಾ ಆರೋಪಿತರಿಗೆ ಕೇಳಿದಾಗ ಹಲ್ಲೆ ಮಾಡುವ ಉದ್ದೇಶದಿಂದ ನೀವುಗಳೆಲ್ಲರು ಅಕ್ರಮಕೂಟ ರಚಿಸಿಕೊಂಡು ಸೇರಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 143 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ದೊಂಬಿ ಮಾಡುವ ಉದ್ದೇಶದಿಂದ ಸದರಿ ಸ್ಥಳದಲ್ಲಿ ಸೇರಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 147 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ದೊಂಬಿ ಮಾಡುವ ಉದ್ದೇಶದಿಂದ ನಿಮ್ಮ ಕೈಯಲ್ಲಿ ಕೋಡಲಿ, ಕಲ್ಲು, ಬಡಿಗೆ ಹಿಡಿದುಕೊಂಡು ಸದರಿ ಸ್ಥಳದಲ್ಲಿ ಸೇರಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 148 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳೆಲ್ಲರೂ ಚಾಸಾ-1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕೈಯಲ್ಲಿ ಕೊಡಲಿ, ಕಲ್ಲು ಮತ್ತು ಬಡಿಗೆ ಹಿಡಿದುಕೊಂಡು ಚಾಸಾ-1 ರವರ ಮನೆಯ ಜಾಗದಲ್ಲಿ ಅಕ್ರಮ ಪ್ರವೇಶ ಮಾಡಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 448 ಸಹವಾಚಕ 149 ರಡಿಯಲ್ಲಿ

ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಹಲ್ಲೆ ಮಾಡುವ ಉದ್ದೇಶದಿಂದ ಸದರಿ ಸ್ಥಳದಲ್ಲಿ ಚಾಸಾ-1 ರವರೊಂದಿಗೆ ಜಗಳ ತೆಗೆದು ಸೂಳೆ ಮಕ್ಕಳೇ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 504 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

6. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾಸಾ-1 ರಿಂದ 8 ರವರಿಗೆ ನಿಮ್ಮನ್ನು ಖಲಾಸ ಮಾಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 506 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

7. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾಸಾ-5 ರವರಿಗೆ ಆರೋಪಿ 6 ಮತ್ತು 7 ರವರು ಕಲ್ಲಿನಿಂದ ಬೆನ್ನಿಗೆ ಹೊಡೆದು ಗುಪ್ತಗಾಯ ಪಡಿಸಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 323 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

8. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 3 ರಿಂದ 5 ಚಾಸಾ-4 ರವರಿಗೆ ಬಡಿಗೆಯಿಂದ, ಕಲ್ಲಿನಿಂದ ತಲೆಗೆ ಬಲಗಾಲಿಗೆ ಒಡೆದು ರಕ್ತಗಾಯ ಪಡಿಸಿ ಕೈಯಿಂದ ಹೊಡೆದು ನೆಲಕ್ಕೆ ಹಾಕಿ ಕಾಲನಿಂದ ಒದ್ದಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 324 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

9. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾಸಾ-1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಆರೋಪಿ1 ಮತ್ತು 2 ಚಾಸಾ-1 ರವರಿಗೆ ಕೊಡಲಿಯಿಂದ ತಲೆ ಮೇಲೆ, ಬಲಪಾದಕ್ಕೆ ಹೊಡೆದು ರಕ್ತಗಾಯ ಮಾಡಿದ್ದು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 307 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ **16.09.2025** ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.